# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 712 |
| ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ ರುದ್ರಪ್ಪ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 11-12-2023 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಸಚಿವರು |

****

| | ಪ್ರಶ್ನೆ | ಉತ್ತರ |
|---|---|---|
| (ಅ) | ಸಕ್ಕರೆ ಕಾರ್ಖಾನೆಗಳಿಂದ ವಿದ್ಯುತ್ ಖರೀದಿ ಮಾಡಲು ವಿಳಂಬ ನೀತಿ ಅನುಸರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು; ಖರೀದಿ ಮಾಡಲು ಇರುವ ಅಡಚಣೆಗಳೇನು; (ವಿವರ ನೀಡುವುದು) | ಸಕ್ಕರೆ ಕಾರ್ಖಾನೆಗಳಿಂದ ನೇರವಾಗಿ ವಿದ್ಯುತ್ ಖರೀದಿ ಮಾಡಲು ಅವಕಾಶವಿರುವುದಿಲ್ಲ.<br>ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಆದೇಶ ದಿನಾಂಕ: 05.06.2018 ರಲ್ಲಿ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು ಬಗಾಸ್ ಆಧಾರಿತ ಸಹವಿದ್ಯುತ್ ಘಟಕಗಳಿಂದ ಖರೀದಿಸುವ ವಿದ್ಯುತ್‌ನ್ನು ಇನ್ನು ಮುಂದೆ Competitive – reverse bidding ಮುಖಾಂತರ ಖರೀದಿಸಬೇಕೆಂದು ಆದೇಶಿಸಿದೆ ಮತ್ತು National Tariff Policy ಪ್ರಕಾರ ಮುಂದಿನ ಎಲ್ಲಾ ವಿದ್ಯುತ್ ಖರೀದಿ ಪ್ರಕ್ರಿಯೆಯು Competitive bidding ಮುಖಾಂತರವೇ ಮಾಡಬೇಕಾಗಿರುತ್ತದೆ.<br>ಬೆಸ್ಕಾಂನಲ್ಲಿ 36 ಸಕ್ಕರೆ ಕಾರ್ಖಾನೆಗಳೊಂದಿಗೆ ಹೊಂದಿದ್ದ ಮಧ್ಯಮಾವಧಿ ವಿದ್ಯುತ್ ಖರೀದಿ ಒಪ್ಪಂದದ ಅವಧಿ ಮುಗಿದಿದ್ದು, ಯಾವುದೇ ಸಕ್ಕರೆ ಕಾರ್ಖಾನೆಯೊಂದಿಗೆ ದೀರ್ಘಾವಧಿ ವಿದ್ಯುತ್ ಖರೀದಿ ಒಪ್ಪಂದ ಹೊಂದಿರುವುದಿಲ್ಲ.<br>ಮೆಸ್ಕಾಂನಲ್ಲಿ 36 ಸಕ್ಕರೆ ಕಾರ್ಖಾನೆಗಳೊಂದಿಗೆ ವಿದ್ಯುತ್ ಖರೀದಿ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಸದರಿ ಒಪ್ಪಂದದ ಅವಧಿ ಮುಕ್ತಾಯಗೊಂಡಿರುತ್ತದೆ. ಪ್ರಸ್ತುತ ಸಕ್ಕರೆ ಕಾರ್ಖಾನೆಗಳೊಂದಿಗೆ ಯಾವುದೇ ವಿದ್ಯುತ್ ಖರೀದಿ ಒಪ್ಪಂದ ಇರುವುದಿಲ್ಲ.<br>ಮುಂದುವರೆದು, ಸೆಸ್ಕ್, ಹೆಸ್ಕಾಂ ಹಾಗೂ ಜೆಸ್ಕಾಂ ನಲ್ಲಿ ಇಲ್ಲಿಯವರೆಗೆ ವಿದ್ಯುತ್ ಒಡಂಬಡಿಕೆ ಒಪ್ಪಂದ ಮಾಡಿಕೊಂಡಿರುವ ಸಕ್ಕರೆ ಕಾರ್ಖಾನೆಗಳ (ಪಿಪಿಎ) ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಲಾಗಿದೆ. |
| (ಆ) | ರಾಜ್ಯದಲ್ಲಿ ಇಲ್ಲಿಯವರೆಗೆ ಎಷ್ಟು ಸಕ್ಕರೆ ಕಾರ್ಖಾನೆಗಳೊಂದಿಗೆ ವಿದ್ಯುತ್ ಒಡಂಬಡಿಕೆ ಒಪ್ಪಂದ ಮಾಡಿಕೊಳ್ಳಲಾಗಿದೆ; (ಪಿಪಿಎ) | |
| (ಇ) | ರಾಜ್ಯದಲ್ಲಿ ಉಳಿದ ಸಕ್ಕರೆ ಕಾರ್ಖಾನೆಗಳೊಂದಿಗೆ ಯಾವಾಗ ವಿದ್ಯುತ್ ಒಡಂಬಡಿಕೆ ಒಪ್ಪಂದ (ಪಿಪಿಎ) ಮಾಡಿಕೊಳ್ಳಲಾಗುವುದು; (ಮಾಹಿತಿ ನೀಡುವುದು) | |
| (ಈ) | ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಕೊರತೆ ಇದೆಯೇ; ಹಾಗಿದ್ದಲ್ಲಿ, ಎಷ್ಟು ಪ್ರಮಾಣದ ವಿದ್ಯುತ್ ಕೊರತೆ ಇದೆ; ವಿದ್ಯುತ್ ಕೊರತೆ ನೀಗಿಸುವಲ್ಲಿ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ 2023-24 ನೇ ಸಾಲಿನ ಏಪ್ರಿಲ್-2023 ರಿಂದ ಸೆಪ್ಟೆಂಬರ್-2023ರ ಅಂತ್ಯದ ವರೆಗೆ ವಿವಿಧ ಮೂಲಗಳಿಂದ ಲಭ್ಯವಾದ ವಿದ್ಯುತ್ತಿನ ಪ್ರಮಾಣ 46867 ಮಿ.ಯೂ (ತಾತ್ಕಾಲಿಕ) ಗಳಾಗಿರುತ್ತದೆ.<br>ರಾಜ್ಯದಲ್ಲಿ 2023-24 ರಲ್ಲಿ ಅಂದಾಜಿಸಲಾದ ವಿದ್ಯುತ್ ಬೇಡಿಕೆ ಪ್ರಮಾಣ 89112 ಮಿ.ಯೂ ಗಳಿದ್ದು, ದಿನವಹಿ ಸರಾಸರಿ ಬೇಡಿಕೆ ಪರಿಮಾಣವು ಏಪ್ರಿಲ್-23 ರಿಂದ ಸೆಪ್ಟೆಂಬರ್-2023 ಅಂತ್ಯದವರೆಗೆ 245 ಮಿ.ಯೂಗಳಾಗಿರುತ್ತದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಮಾಸಿಕ ರಾಜ್ಯದ ಬೇಡಿಕೆಯು 32% ರಷ್ಟು ಹೆಚ್ಚಾಗಿದೆ. ಬೇಡಿಕೆಯ ಹೆಚ್ಚಳದಿಂದಾಗಿ, ರಾಜ್ಯದಲ್ಲಿ ಆಗಸ್ಟ್-2023 ರಿಂದ ಅಕ್ಟೋಬರ್ ತಿಂಗಳ |

| | | |
|---|---|---|
| | | ಕೆಲವು ದಿನಗಳಲ್ಲಿ ಕೊರತೆಯನ್ನು ಅನುಭವಿಸಲಾಗಿತ್ತು. ಆದರೆ, ಸರ್ಕಾರವು ಸಕಾಲದಲ್ಲಿ ಅಗತ್ಯ ಕ್ರಮ ಕೈಗೊಂಡಿರುವುದರಿಂದ ಪರಿಸ್ಥಿತಿ ಸಾಮಾನ್ಯಕ್ಕೆ ಬಂದಿದೆ. ಬೇಡಿಕೆಯು ಕೂಡ ತಗ್ಗಿದೆ. ರಾಜ್ಯದಲ್ಲಿ ಸದ್ಯದಲ್ಲಿ ಯಾವುದೇ ಕೊರತೆ ಇರುವುದಿಲ್ಲ. |
| | | ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರವು ಕೈಗೊಂಡ ಕ್ರಮಗಳು ಈ ಕೆಳಗಿನಂತಿವೆ;<br>• ಕೊರತೆಯಾದ ವಿದ್ಯುತ್ತನ್ನು ದಿನವಹಿ ಆಧಾರದಲ್ಲಿ ವಿವಿಧ ವಿದ್ಯುತ್ ವಿನಿಮಯ ಕೇಂದ್ರಗಳಿಂದ ಖರೀದಿ ಮಾಡಲಾಗುತ್ತದೆ.<br>• ರಾಜ್ಯ ಸರ್ಕಾರವು ದಿನಾಂಕ: 16.10.2023ರಿಂದ ಎಲ್ಲಾ ರಾಜ್ಯದ ವಿದ್ಯುತ್ ಉತ್ಪಾದಕರ ಮೇಲೆ ಸೆಕ್ಷನ್-11 ನ್ನು ಜಾರಿಗೊಳಿಸಿರುತ್ತದೆ.<br>• ರಾಜ್ಯವು ಉತ್ತರಪ್ರದೇಶ ಹಾಗೂ ಪಂಜಾಬ್ ರಾಜ್ಯಗಳಿಂದ ಬ್ಯಾಂಕಿಂಗ್ (Banking/Swapping of Power) ಮೂಲಕ ನವೆಂಬರ್-2023 ರಿಂದ ಮೇ-2024ರ ವರೆಗೆ ವಿದ್ಯುತ್ ಪಡೆಯಲು ಬ್ಯಾಂಕಿಂಗ್ ವ್ಯವಸ್ಥೆ ಮಾಡಿಕೊಳ್ಳಲಾಗಿರುತ್ತದೆ.<br>• 302 ಮೆ.ವ್ಯಾ ವಿದ್ಯುತ್ತನ್ನು ದಿನಾಂಕ: 24.11.2023 ರಿಂದ 30.06.2024 ರವರೆಗೆ ಕರ್ನಾಟಕ ರಾಜ್ಯಕ್ಕೆ ನೀಡಲು ಕೇಂದ್ರ ವಿದ್ಯುತ್ ಮಂತ್ರಾಲಯವು (MoP) ದಿನಾಂಕ: 22.11.2023 ರ ಪತ್ರದಲ್ಲಿ ಅನುಮೋದನೆ ನೀಡಿರುತ್ತದೆ. |

ಸಂಖ್ಯೆ: ಎನರ್ಜಿ 306 ಇಬಿಎಸ್ 2023

(ಕೆ.ಜೆ.ಜಾರ್ಜ್) 7/12/23
ಇಂಧನ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 712 ಕ್ಕೆ ಅನುಬಂಧ

ವಿದ್ಯುತ್ ಸರಬರಾಜು ಕಂಪನಿಗಳಿಂದ ಅಕ್ಟೋಬರ್-23ರ ಅಂತ್ಯದವರೆಗೆ ಸಕ್ಕರೆ ಕಾರ್ಖಾನೆಗಳೊಂದಿಗೆ ವಿದ್ಯುತ್ ಒಪ್ಪಂದ ಮಾಡಿಕೊಂಡಿರುವ (ಪಿಪಿಎ) ದ ವಿವರ

| ಕ್ರ. ಸಂ. | ಮೂಲಗಳು | ಸಾಮರ್ಥ್ಯ | ಒಪ್ಪಂದ ದಿನಾಂಕ | ಸ್ಥಳ | | | ಒಪ್ಪಂದ ಅವಧಿ (ವರ್ಷ) |
|---|---|---|---|---|---|---|---|
| ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ | | | | ಊರು | ತಾಲ್ಲೂಕು | ಜಿಲ್ಲೆ | |
| 1 | ಮೆ\|\| ಪ್ಯಾರಿಸ್ ಶುಗರ್ ಇಂಡಸ್ಟ್ರೀಸ್ ಲಿಮಿಟೆಡ್ (ಜಿಎಂಆರ್ ಇಂಡಸ್ಟ್ರೀಸ್ ಲಿಮಿಟೆಡ್) | 7.5 | 08-10-2010/ 25-04-2012 | ಖಾನಪೇಟ್ | ರಾಮದುರ್ಗ | ಬೆಳಗಾವಿ | 20 |
| 2 | ಮೆ\|\| ನಿರಾಣಾನಿ ಶುಗರ್- tg- ನಾನು | 11.0 | 18.12.2006 | ಕುಳಲಿ ಕ್ರಾಸ್ ಜಮಖಂಡಿ ರಸ್ತೆ | ಮುಧೋಳ | ಬಾಗಲಕೋಟೆ | 20 |
| 3 | ಮೆ\|\| ವೆಂಕಟೇಶ್ವರ ಪವರ್ ಪ್ರಾಜೆಕ್ಟ್ | 10.0 | 26.10.2004 | ಬೇಡ್ಕಿಹಾಳ್ | ಚಿಕ್ಕೋಡಿ | ಬೆಳಗಾವಿ | 20 |
| 4 | ಮೆ\|\| ಬಾಲಾಜಿ & ಕೆಮಿಕಲ್ ಪ್ರೈವೇಟ್ ಲಿಮಿಟೆಡ್ | 15.74 | 25-06-2016 | ಯರಗಲ್ | ಮುದ್ದೇಬಿಹಾಳ | ವಿಜಯಪುರ | 20 |
| 5 | ಮೆ\|\| ಶ್ರೀ ಬಸವೇಶ್ವರ ಶುಗರ್ ಲಿಮಿಟೆಡ್ | 22.0 | 13-10-2016 | ಕಾರ್ಜೋಲ್ | ವಿಜಯಪುರ | ವಿಜಯಪುರ | 20 |
| 6 | ಮೆ\|\| ಸಾಯಿ ಪ್ರಿಯಾ ಸಕ್ಕರೆಗಳು | 24.0 | 23-06-2016 | ಹಿಪ್ಪರಗಿ- ಮೈಗೂರು | ಜಮಖಂಡಿ | ಬಾಗಲಕೋಟೆ | 20 |
| 7 | ಮೆ\|\| ವಿಶ್ವನಾಥ್ ಸಕ್ಕರೆ ಲಿಮಿಟೆಡ್ (ವಿಶ್ವಾರಾಜ್ ಸಕ್ಕರೆ) | 7.8 | 26.07.2001 | ಬೆಲ್ಲದ ಬಾಗೇವಾಡಿ | ಹುಕ್ಕೇರಿ | ಬೆಳಗಾವಿ | 20 |
| 8 | ಮೆ\|\|ಬಿಲಗಿ ಶುಗರ್ ಮಿಲ್ ಲಿಮಿಟೆಡ್ ಯುನಿಟ್ 1 | 4.5 | 07.11.2017 | ಬಡಗಂಡಿ | ಬಿಳಗಿ | ಬಾಗಲಕೋಟೆ | 20 |
| 9 | ಮೆ\|\| ಬಿಲಗಿ ಶುಗರ್ ಮಿಲ್ ಲಿಮಿಟೆಡ್ ಯುನಿಟ್ -2 | 26.5 | | ಬಡಗಂಡಿ | ಬಿಳಗಿ | ಬಾಗಲಕೋಟೆ | 20 |
| 10 | ಮೆ\|\| ಗೊಕಾಕ್ ಶುಗರ್ ಲಿಮಿಟೆಡ್- | 6.5 | 02-09-2010 | ಕೊಲವಿ | ಗೋಕಾಕ್ | ಬೆಳಗಾವಿ | 20 |
| 11 | ಮೆ\|\| ರೈತರ್ ಸಹಕಾರಿ ಸಕ್ಕರೆ ಕಾರ್ಖೇನ್ ನೀಮಿತ್, | 7.735 | 28.12.2010 | "ರನ್ನನಗರ, | ಮುಧೋಳ | ಬಾಗಲಕೋಟೆ | 20 |
| 12 | ಮೆ\|\| ಕೃಷ್ಣ ಸಹಕಾರಿ ಸಕ್ಕರೆ ನಿಮಿತ್ ಲಿಮಿಟೆಡ್ | 7.0 | 27.09.2012 | ತಿಮ್ಮಾಪುರ" | ಅಥಣಿ | ಬೆಳಗಾವಿ | 20 |
| 13 | ಮೆ\|\|ಬೆಳಗಾವಿ ಶುಗರ್ ಪ್ರೈವೇಟ್ ಲಿಮಿಟೆಡ್ | 13 | 01.12.2016 | ಸಂಕೋನಟ್ಟಿ, ಹಳಿಯಾಳ | ಬೆಳಗಾವಿ | ಬೆಳಗಾವಿ | 20 |
| 14 | ಮೆ\|\| ಹಲಾಶಿಧನಾಥಾದ ಸಹಕಾರಿ ಸಹಕಾರಿ ಸಖರ್ ಕಾರ್ಖಾನಾ ಲಿಮಿಟೆಡ್ | 8.94 | 03.11.2016 | ಹುದಲಿ | ಚಿಕ್ಕೋಡಿ | ಬೆಳಗಾವಿ | 20 |
| 15 | ಮೆ\|\| ಹರ್ಷ ಸಕ್ಕರೆ | 27.0 | 24.03.2017 | ಸವದತ್ತಿ | ಸವದತ್ತಿ | ಬೆಳಗಾವಿ | 20 |
| 16 | ಮೆ\|\| ಭೀಮಶಂಕರ್ ಸಕ್ಕರೆ ಲಿಮಿಟೆಡ್ | 12.0 | 26.12.2016 | ಮಾರ್ಗೂರ್ | ಇಂಡಿ | ವಿಜಯಪುರ | 20 |
| 17 | ಮೆ\|\| ಸಾವರಿನ್ ಇಂಡಸ್ಟ್ರೀಸ್ | 18.2 | 22.12.2016 | ತೆರದಾಲ | ಜಮಖಂಡಿ | ಬಾಗಲಕೋಟೆ | 20 |
| 18 | ಮೆ\|\|ಅಥಣಿ ಶುಗರ್ಸ್ | 25.42 | 21.02.2018 | ವಿಷ್ಣುಣ್ಣನಗರ ನವಲಿಹಾಳ್ ಪೋಸ್ಟ್ | ಅಥಣಿ | ಬೆಳಗಾವಿ | 20 |

....2

| | | | | | | | |
|---|---|---|---|---|---|---|---|
| **ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ** | | | | | | | |
| 1 | ಮೆ\|\| ಮೈಸೂರು ಶುಗರ್ಸ್ ಕಂಪನಿ | 19.22 | 28.12.2015 | ಮಂಡ್ಯ | ಮಂಡ್ಯ | ಮಂಡ್ಯ | 20 |
| 2 | ಮೆ\|\| ಚಾಮುಂಡೇಶ್ವರಿ ಶುಗರ್ಸ್ ಲಿ. | 18 | 20.02.2017 | ಶ್ರೀನಿವಾಸಪುರ | ಚನ್ನರಾಯಪಟ್ಟಣ | ಹಾಸನ | 20 |
| | | | | | | | |
| **ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ** | | | | | | | |
| 1 | ಮೆ\|\| ನಾರಾಂಜಾ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್ | 14 | 09.06.2005 | ಇಮಾಮ್‌ಪೂರ್ | ಬೀದರ | ಬೀದರ | 20 |
| 2 | ಮೆ\|\| ಮಹಾತ್ಮ ಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ (ನಿ) | 13 | 04.01.2010 | ಹುಂಜಿ(ಎ) | ಭಾಲ್ಕಿ | ಬೀದರ | 20 |
| 3 | ಮೆ\|\| ಮೈಲಾರ್ ಶುರ್ಗಸ್ ಸಹಕಾರಿ ಸಕ್ಕರೆ ಲಿಮಿಟೆಡ್ | 15.68 | 27.08.2016 | ಬೀರಬ್ಬಿ | ಹೂವಿನಹಡಗಲಿ | ಬಳ್ಳಾರಿ | 20 |
| 4 | ಮೆ\|\| ಬೀದರ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್ | 13 | 22.03.2017 | ಮೋದಗಾಲ | ಬೀದರ | ಬೀದರ | 20 |